ದಿನಾಂಕ 22.09.2018 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀಸವಾಲುಃ- ಆರೋಪಿ 2 ರಿಂದ 4 ರವರ ಪರವಾಗಿ ಶ್ರೀ.ಆರ್.ಎಸ್. ವಕೀಲರವರಿಂದಃ</u>**

57. ದೂರನ್ನು ನಾನು ಬರೆದಿಲ್ಲ. ಆದರೆ ಯಾರು ಬರೆದಿದ್ದಾರೆ ಎಂಬುವುದು ಗೊತ್ತಿಲ್ಲ. ನಾನು ಎಸ್.ಎಸ್.ಎಲ್.ಸಿ. ವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ದೂರನ್ನು ನಿಮಗೆ ಬರೆಯಲು ತೊಂದರೆ ಇರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಗಾಬರಿಯಲ್ಲಿದ್ದೆ, ಆ ಪರಿಸ್ಥಿತಿಯಲ್ಲಿ ನಾನು ದೂರು ಬರೆಯುವ ಸ್ಥಿತಿಯಲ್ಲಿ ಇರಲಿಲ್ಲ ಎಂದು ಉತ್ತರಿಸಿದ್ದಾರೆ.

58. ದೂರು ಕೊಟ್ಟ ನಂತರ ನನ್ನ ಮನೆಗೆ 5-6 ಜನ ಪೊಲೀಸರು ಬಂದಿದ್ದಾರೆ. ಆದರೆ ಅವರುಗಳ ಹೆಸರು ನನಗೆ ಗೊತ್ತಿಲ್ಲ. ನಾನು ರೂ.20,000/- ವನ್ನು ಆನಂತರದಲ್ಲಿ ಠಾಣೆಯಿಂದ ಬಿಡಿಸಿಕೊಂಡಿದ್ದೇನೆ. ನಾನು ದೂರಿನಲ್ಲಿ ರೂ.60,000/- ಎಂದು ತಿಳಿಸಿದ್ದೇನೆ. ಆದರೆ ಅವುಗಳ ಮುಖಬೆಲೆ ನನಗೆ ಗೊತ್ತಿಲ್ಲ.

59. ನನ್ನ ಮನೆಗೆ ಬಂದ 3 ಜನರ ಪೈಕಿ ಒಬ್ಬರು ಬಿಳಿಯ ಬಟ್ಟೆಯನ್ನು, ಮತ್ತೊಬ್ಬರು ಕಾಫಿ ಕಲರ್‌ನ ಷರ್ಟ್ ಮತ್ತು ಇನ್ನೊಬ್ಬರು ಕುರ್ತ ಧರಿಸಿದ್ದರು, ಆದರೆ ಅದರ ಬಣ್ಣವನ್ನು ಈಗ ನೆನಪಿಸಿಕೊಳ್ಳಲಾಗದು. ಆ ರೀತಿ ಬಂದಿದ್ದ 3 ಜನ ವ್ಯಕ್ತಿಗಳು ಮುಸ್ಲಿಂ ಮತ್ತು ಕನ್ನಡ ಭಾಷೆಯನ್ನು ಮಾತನಾಡುತ್ತಿದ್ದರು.

60. ದೂರು ಕೊಟ್ಟ ಸುಮಾರು ಒಂದೂವರೆ ತಿಂಗಳಿನ ನಂತರದಲ್ಲಿ ನಾನು ರಾಮನಗರ ಜೈಲಿಗೆ ಹೋಗಿದ್ದೇನೆ. ಆದರೆ ಆ ರೀತಿ ಹೋದ ದಿನಾಂಕ ನನಗೆ ನೆನಪಿಲ್ಲ. ನಾನು ನೋಡಿದಾಗ ಸುಮಾರು ಜನ ಆರೋಪಿಗಳನ್ನು ನಿಲ್ಲಿಸಿದ್ದರು. ಅವರುಗಳಲ್ಲಿ 3 ಜನರನ್ನು ಗುರುತಿಸಿದ್ದೇನೆ. ಆ ರೀತಿ ಒಟ್ಟು ಎಷ್ಟು ಜನ ಆರೋಪಿಗಳನ್ನು ನಿಲ್ಲಿಸಿದ್ದರು ಎಂದು ಸಂಖ್ಯೆಯನ್ನು ತಿಳಿಸಲು ಆಗದು. ನನ್ನ ಪಕ್ಕದಲ್ಲೇ ಚೇರಿನ ಮೇಲೆ ಪೊಲೀಸರು ಮತ್ತು ತಹಶೀಲ್ದಾರರು ಕುಳಿತಿದ್ದರು. ತಹಶೀಲ್ದಾರರು 3 ಜನರನ್ನು ತೋರಿಸಿ ಇವರುಗಳೇ ಈ ಪ್ರಕರಣದ ಆರೋಪಿಗಳು ಎಂದು ತಿಳಿಸಿದ ಮೇರೆಗೆ ನಾನು 3 ಜನ ಆರೋಪಿಗಳನ್ನು ಗುರುತಿಸಿದ್ದೇನೆ ಎನ್ನುವುದು ಸರಿಯಲ್ಲ. ನಿಂತಿದ್ದ ಎಲ್ಲಾ ಆರೋಪಿಗಳ ಪೈಕಿ 3 ಜನರನ್ನು ನಾನು ಗುರುತಿಸಿದ್ದೇನೆ.

61. ನನ್ನ ಗಂಡನ ಸಂಬಂಧಿ ಒಬ್ಬರು ಪೊಲೀಸ್ ಇಲಾಖೆಯಲ್ಲಿ ಕೆಲಸದಲ್ಲಿ ಇದ್ದಾರೆ ಎನ್ನುವುದು ಸರಿ. ನನ್ನ ಗಂಡನ ಇನ್ನೊಬ್ಬ ಸಂಬಂಧಿ ಮಾನ್ಯ ಮುಖ್ಯಮಂತ್ರಿಯವರ ಕಛೇರಿಯಲ್ಲಿ ಕೆಲಸದಲ್ಲಿ ಇದ್ದಾರೆ ಎನ್ನುವುದು ಸರಿ. ಆರೋಪಿಗಳು ಯಾರು ನನ್ನ ಮನೆಗೆ ಬಂದಿಲ್ಲ ಎನ್ನುವುದು ಸರಿಯಲ್ಲ. ನನ್ನ ಗಂಡನ ಸಂಬಂಧಿ ಮಾನ್ಯ ಮುಖ್ಯಮಂತ್ರಿಯವರ ಕಛೇರಿಯಲ್ಲಿ ಕೆಲಸ ಮಾಡುತ್ತಿರುವುದರಿಂದ ಮತ್ತು ಇನ್ನೊಬ್ಬ ಸಂಬಂಧಿ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಡುತ್ತಿರುವುದರಿಂದ ರಾಮನಗರ ಗ್ರಾಮಾಂತರ ಪೊಲೀಸರ ಮೇಲೆ

ಒತ್ತಡವನ್ನು ಬೀರಿ ನಿರಾಪರಾಧಿಗಳ ಮೇಲೆ ಸುಳ್ಳು ಕೇಸನ್ನು ದಾಖಲಿಸಲಾಗಿದೆ ಎನ್ನುವುದು ಸರಿಯಲ್ಲ.

**ಪಾಟೀಸವಾಲುಃ- ಆರೋಪಿ 5 ರಿಂದ 7 ರವರ ಪರ ವಕೀಲರವರಿಂದಃ ಇರುವುದಿಲ್ಲ ಎಂದು ತೆಗೆದುಕೊಳ್ಳಲಾಗಿದೆ.**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಗೋಪಾಲ ಕೃಷ್ಣ ರೈ ಟಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.